ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4244
ಸದಸ್ಯರ ಹೆಸರು : ಶ್ರೀ ಬೋಪಯ್ಯ ಕೆ.ಜಿ.(ಮಡಿಕೇರಿ)
ಉತ್ತರಿಸುವ ದಿನಾಂಕ : 04.07.2005
ಉತ್ತರಿಸುವವರು : ಮಾನ್ಯಲೋಕೋಪಯೋಗಿ ಮತ್ತು ಇಂಧನ

ಸಂಖ್ಯೆ	ಪ್ರಶ್ನೆ	ಉತ್ತರ
1	ಕೊಡಗು ಜಿಲ್ಲೆಯಲ್ಲಿ 2004–05,2005–06 ನೇ ಸಾಲಿನಲ್ಲಿ ಎಷ್ಟು ಹೊಸ ಸೇತುವೆಗಳ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ: (ವಿವರ ನೀಡುವುದು)	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ 2005–06 ರಿಂದ ಮೂರು ವರ್ಷದ ಅವಧಿಯಲ್ಲಿ ಕೊಡಗು ಜಿಲ್ಲೆಯಲ್ಲಿ 4 ಹೊಸ ಸೇತುವೆಗಳ ನಿರ್ಮಾಣವನ್ನು 780 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದ್ದು, ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
2	2004–05 ಹಾಗೂ 2005–06 ನೇ ಸಾಲಿನಲ್ಲಿ ಎಷ್ಟು ರಸ್ತೆಗಳು ಡಾಂಬರೀಕರಣ ಮತ್ತು ರಸ್ತೆ ನಿರ್ಮಾಣಗಳನ್ನು ಕೈಗೆತ್ತಿಕೊಳ್ಳಲಾಗಿದೆ (ವಿವರ ನೀಡುವುದು)	2004–05 ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ (1) ಸಕಲೇಶಪುರ ಸೋಮವಾರಪೇಟೆ–ಮಡಿಕೇರಿ–ವಿರಾಜಪೇಟೆ ರಸ್ತೆಯಲ್ಲಿ ಕಿಮೀ.25.20ರಿಂದ 131.10 ಕಿಮೀ.ವರೆಗೆ (105.90ಕಿಮೀ) ಮತ್ತು (2) ಹುಣಸೂರು–ವಿರಾಜಪೇಟೆ ರಸ್ತೆ ಕಿಮೀ.44.00 ರಿಂದ 54.78 ಕಿಮೀ. ರಸ್ತೆಯ ಮರುಡಾಂಬರೀಕರಣವನ್ನು ಕರ್ನಾಟಕ ರಸ್ತೆ ಅಭಿವೃದ್ಧಿಯ ರಾಜ್ಯ ಹೆದ್ದಾರಿಯ ನಿರ್ವಹಣೆಯ ಯೋಜನೆಯ ಅಡಿಯಲ್ಲಿ ಕೊಡಗು ಜಿಲ್ಲೆಯಲ್ಲಿ 513.76 ಕಿಮೀ. ರಾಜ್ಯ ಹೆದ್ದಾರಿಯನ್ನು 1593.00 ಲಕ್ಷ ರೂ. ಗಳ ಅಂದಾಜು ವೆಚ್ಚದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ತೆಗೆದುಕೊಳ್ಳಲಾಗುತ್ತಿದ್ದು, ಟೆಂಡರು ಪ್ರಕ್ರಿಯೆಯ ಪ್ರಗತಿಯಲ್ಲಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ	ಪ್ರಶ್ನೆ	ಉತ್ತರ
2	ಇದಕ್ಕಾಗಿ ಬಿಡುಗಡೆಯಾಗಿರುವ ವೆಚ್ಚವಾಗಿರುವ ಹಣ ಎಷ್ಟು?	2004–05ರಲ್ಲಿ ತೆಗೆದುಕೊಂಡ ಮರು ಡಾಂಬರೀಕರಣ ಕಾಮಗಾರಿಗಳಿಗೆ ಬಿಡುಗಡೆಯಾದ ಹಣ 7.16 ಕೋಟಿ ಗಳು ಖರ್ಚಾದ ಹಣ ರೂ.7.13 ಕೋಟಿಗಳು. 2005–08ರ ರಾಜ್ಯ ಹೆದ್ದಾರಿಯ ಮುರು ವರ್ಷಗಳ ನಿರ್ವಹಣೆಯ ಯೋಜನೆಯ ಗುತ್ತಿಗೆ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಅ) ಎರಡನೆಯ ಹಂತದ ಸೇತುವೆ ನಿರ್ಮಾಣ ಕಾಮಗಾರಿಯ ಅಡಿಯಲ್ಲಿ ಕೊಡಗು ಜಿಲ್ಲೆಯಲ್ಲಿ ತೆಗೆದುಕೊಂಡ ಸೇತುವೆಗಳ ವಿವರ.

ಕ್ರ. ಸಂ.	ತಾಲ್ಲೂಕು	ಸೇತುವೆ ವಿವರ	ರಸ್ತೆಯ ವಿವರ	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
1	ಸೋಮವಾರಪೇಟೆ	ಮಡಕೇರಿ ಮಾರುಕಟ್ಟೆ ರಸ್ತೆ ಕಿ.ಮೀ. 24.50ರಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	ರಾ.ಹೆ	580.00
2	ವಿರಾಜಪೇಟೆ	ಹುಣಸೂರು–ವಿರಾಜಪೇಟೆ ರಸ್ತೆ 37.00 ಸೀಗೆತೋಡು ಹತ್ತಿರ ಸೇತುವೆ ನಿರ್ಮಾಣ	ರಾ.ಹೆ	70.00
3	ಮಡಿಕೇರಿ	ಅಯ್ಯಂಗೇರಿ–ಬಂಡಿಕೊಡವ ರಸ್ತೆ ಕಿಮೀ. 19.00ರಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	ಜಿ.ಮು.ರ	80.00
4	ಮಡಿಕೇರಿ	ನಾಪೋಕ್ಲು–ಭಾಗಮಂಡಲ ರಸ್ತೆ ಕಿ.ಮೀ. 10.00ರಲ್ಲಿ ಸೇತುವೆ ನಿರ್ಮಾಣ	ಜಿ.ಮು.ರ 50.00	
	ಒಟ್ಟು 4 ಸೇತುವೆಗಳು		ಒಟ್ಟು ಮೊತ್ತ	**780.00**

ಆ) ರಾಜ್ಯ ಹೆದ್ದಾರಿ ನಿರ್ವಹಣೆ (2005–08)ಯಲ್ಲಿ ಕೊಡಗು ಜಿಲ್ಲೆಯಲ್ಲಿ ತೆಗೆದುಕೊಂಡ ರಸ್ತೆಗಳ ವಿವರ

ಕ್ರ. ಸಂ.	ರಾ.ಹೆ. ಸಂಖ್ಯೆ	ರಸ್ತೆಯ ವಿವರ	ಸರಪಳಿ ಪ್ರಾರಂಭ–ಅಂತ್ಯ	ಒಟ್ಟು ಉದ್ದ	ಅಂದಾಜು ಮೊತ್ತ ಲಕ್ಷ ರೂ. ಗಳಲ್ಲಿ
1	88	ಮೈಸೂರು–ಬಂಟ್ವಾಳ ರಸ್ತೆ	88.30–148.50 ಕಿ.ಮೀ.	60.20	186.60
2	91	ಕಣ್ಣಾನೂರು–ಮಾಕುಟ್ಟ ರಸ್ತೆ	9.60–90.10 ಕಿ.ಮೀ.	80.50	249.50
3	89	ಮಡಿಕೇರಿ–ಕುಟ್ಟಾ ರಸ್ತೆ	0.00–86.00 ಕಿ.ಮೀ.	86.00	266.60
4	8	ಹಿರಿಸಾವೆ–ಚೆಟ್ಟಳ್ಳಿ ರಸ್ತೆ	90.30–101.06 ಕಿ.ಮೀ.		
			419.80–170.00 ಕಿ.ಮೀ.	60.00	189.10
5	90	ಹುಣಸೂರು–ತಲಕಾವೇರಿ ರಸ್ತೆ	21.74–117.50 ಕಿ.ಮೀ.	95.76	296.80
6	85	ಬೆಂಗಳೂರು–ಜಾಲ್ಸೂರು ರಸ್ತೆ		28.90	89.60
7	27	ವಿರಾಜಪೇಟೆ–ಬೈಂದೂರು ರಸ್ತೆ	0.00–101.40	101.40	314.3
		ಒಟ್ಟು		**513.76**	**1593.00**

ಪ್ರಶ್ನೆ ಸಂಖ್ಯೆ: 328(4244)

ಉತ್ತರ ಲಗತ್ತಿಸಿದೆ

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆಗಳಿಗೆ ಸಚಿವರು ಉತ್ತರಗಳನ್ನು ಒದಗಿಸಿದ್ದಾರೆ. ಆದರೆ, ಅಧಿಕಾರಿಗಳಾದವರು ಎಷ್ಟು ಬೇಜವಾಬ್ದಾರಿಯಿಂದ ಉತ್ತರಗಳನ್ನು ಒದಗಿಸುತ್ತಾರೆನ್ನುವುದಕ್ಕೆ ಈಗ ನೀಡಿರುವ ಉತ್ತರವೇ ಸಾಕ್ಷಿಯಾಗಿದೆ. ರಾಜ್ಯ ಹೆದ್ದಾರಿ ನಿರ್ವಹಣೆ (2005–08)ಯಲ್ಲಿ ಕೊಡಗು ಜಿಲ್ಲೆಯಲ್ಲಿ ತೆಸೆದುಕೊಂಡ ರಸ್ತೆಗಳ ವಿವರದ ಕ್ರಮ ಸಂಖ್ಯೆ 6 ಮತ್ತು7 ರಲ್ಲಿ ಕ್ರಮವಾಗಿ ಬೆಂಗಳೂರು–ಜಾಲ್ಸೂರು ರಸ್ತೆ ಹಾಗೂ ವಿರಾಜಪೇಟೆ–ಬೈಂದೂರು ರಸ್ತೆಗಳ ಕುರಿತು ಮಾಹಿತಿ ನೀಡಿದ್ದಾರೆ. ಆದರೆ, ನಮ್ಮ ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ, ಜಿಲ್ಲೆಯನ್ನು ನೀವು ಯಾವಾಗ ಜಾಲ್ಸೂರುವರೆಗೆ, ಬೈಂದೂರಿನವರೆಗೆ ವಿಸ್ತರಿಸಿದಿರಿ? ಇದಕ್ಕೆ ಬೇಜವಾಬ್ದಾರಿಯಿಂದ ಉತ್ತರ ನೀಡಿರುವುದರಿಂದ ತಾವು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಈ ರೀತಿಯಾಗಿ ಉತ್ತರಿಸಿದರೆ ಏನರ್ಥ? ಇನ್ನು ಎರಡನೆಯದಾಗಿ, 2005–06ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳೆಲ್ಲವೂ

ಪ್ರಗತಿಯಲ್ಲಿರುವುದಾಗಿ ಹೇಳಿದ್ದೀರಿ. ಅಲ್ಲ. ಕೊಡಗಿನಲ್ಲಿ ಯಾವುದೇ ರಸ್ತೆಗಳಿರಬಹುದು, ಗುಂಡಿ ಗಳನ್ನು ಮುಚ್ಚುವುದಿರಬಹುದು ಡಾಂಬರೀಕರಣ. ಮುಗಿಸಬೇಕೆಂದು. ಇಲ್ಲದಿದ್ದರೆ. ಮಳೆ ಬಂದು ರಸ್ತೆಗಳೆಲ್ಲವೂ ಹಾಳಾಗುತ್ತದೆಂದು ಜಿಲ್ಲೆಯ ಪರವಾಗಿ ನಾನು ಕಳೆದ ಸಲದ ಅಧಿವೇಶನದಲ್ಲಿಯೇ ಹೇಳಿದ್ದೇ ಆದರೆ, ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಕಳೆದ ಮೇ ತಿಂಗಳಿನಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಿದ್ದರೂ ಮೊನ್ನೆ ಬಿದ್ದ ಮಳೆಯಿಂದಾಗಿ ರಸ್ತೆಗಳಲ್ಲಿ. ಮತ್ತೆ ಗುಂಡಿಯುಂಟಾಗಿದ್ದು, ವಾಹನಗಳನ್ನು ಓಡಿಸುವುದಕ್ಕಾಗುತ್ತಿಲ್ಲ ವಿಶೇಷವಾಗಿ ಮೈಸೂರು–ಬಂಟ್ವಾಳ ರಸ್ತೆಯ ಬಗ್ಗೆ ಕೇಳಿದ್ದು ಇದು ಮೂರು ಹಂತಗಳಲ್ಲಿ ಸಾಗುತ್ತಿದ್ದು. ಮೊದಲ ಹಂತ ಮೈಸೂರಿನಿಂದ ಕುಶಾಲನಗರಕ್ಕೆ ಇದರ ಪ್ರಾರಂಭವನ್ನು ಮೊನ್ನೆ ಮಾನ್ಯ ಉಪಮುಖ್ಯಮಂತ್ರಿಗಳು ಮಾಡಿದ್ದಾರೆ. ಮತ್ತು ಕುಶಾಲನಗರದಿಂದ ಮಂಗಳೂರಿನವರೆಗೆ ರಸ್ತೆಯ ಪರಿಸ್ಥಿತಿ ಹೇಗಿದೆಯೆಂದರೆ ಮಂಗಳೂರಿಗೆ ನಮ್ಮ ಜಿಲ್ಲೆಯ ಜನರ ಸಂಪರ್ಕ ಸಾಕಷ್ಟಿದೆ. ಯಾವುದೇ ಒಂದು ಚಿಕಿತ್ಸೆಗೂ ಮಂಗಳೂರನ್ನೇ ಆಶ್ರಯಿಸುವಂಥ ಪರಿಸ್ಥಿತಿ ಇದೆ ಮತ್ತು ಯಾವುದೇ ಅಪಘಾರವಾದರೂ ಕೂಡ ಗಾಯಾಳುವನ್ನು ಮಂಗಳೂರಿಗೆ ತೆಗೆದುಕೊಂಡು ಹೋಗಬೇಕಾಗಿರುತ್ತದೆ.

ಶ್ರೀ ಕೆ.ಜಿ. ಬೋಪಯ್ಯ (ಮುಂದು) ಹಿಂದೆ ಮೂರು ಇಲ್ಲವೆ ಮೂರುವರೆ ಗಂಟೆಯೊಳಗೆ ಮಂಗಳೂರಿಗೆ ತಲುಪುತ್ತಿದ್ದೆವು, ಆದರೆ ಈಗ ಐದುಗಂಟೆಯಾದರೂ ಸಾಕಾಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಮೈಸೂರು ಬಂಟ್ವಾಳ ರಸ್ತೆ ಇದೆ. ನಾವು ಸಾಕಷ್ಟು ಒತ್ತಾಯವನ್ನೂ ಮಾಡಿದ್ದೆವು. ಮೈಸೂರು–ಬಂಟ್ವಾಳ ರಸ್ತೆಯನ್ನು ಮಡಕೇರಿಯಿಂದ ಮಂಗಳೂರಿನವರೆಗೆ ಮೊದಲ ಹಂತದಲ್ಲಿ ತೆಗೆದುಕೊಳ್ಳಬೇಕೆಂದು ಮನವಿಯನ್ನೂ ಎಲ್ಲಾ ಶಾಸಕರು ಮಾಡಿದ್ದರು. ಆದರೆ ಸರ್ಕಾರ ಇದಕ್ಕೆ ಗಮನಹರಿಸಲಿಲ್ಲ ಇನ್ನಂತು ಆ ರಸ್ತೆಯಲ್ಲಿ ಓಡಾಡಲು ಆಗದಂಥ ಪರಿಸ್ಥಿತಿ ಇದೆ. ದಯವಿಟ್ಟು ನಾನು ವಿನಂತಿ ಮಾಡುತ್ತೇವೆ, ಮೈಸೂರು–ಬಂಟ್ವಾಳ ರಸ್ತೆಯೇನಿದೆ ಮಡಕೇರಿ ಯಿಂದ ಮಂಗಳೂರಿನವರೆಗೆ ತಕ್ಷಣ ಪ್ರಾರಂಭ ಮಾಡಬೇಕು, ಈಗಂತೂ ಗುಂಡಿಯನ್ನು ಮುಚ್ಚಲು ಆಗುವುದಿಲ್ಲ. ಡಿಸೆಂಬರ್‌ವರೆಗೆ ಅಲ್ಲಿ ಓಡಾಡಲು ಆಗದಂಥ

ಪರಿಸ್ಥಿತಿ, ಇದು ಪ್ರತಿವರ್ಷ ಈ ಜಿಲ್ಲೆಯಲ್ಲಿ ಆಗುವಂಥದ್ದು. ಜನ ಇವತ್ತು ಹೇಗಿದ್ದಾರೆಂದರೆ ಪ್ರತಿಭಟನೆ ಮಾಡಿ ಕೆಲಸವನ್ನು ನಿಲ್ಲಿಸುವಂಥ ಪರಿಸ್ಥಿತಿ ಮಳೆಬರುತ್ತಿದೆ, ಒಂದು ಕಡೆಯಿಂದ ಗುಂಡಿ ಮುಚ್ಚುವುದು ಆದ್ದರಿಂದ ಸರ್ಕಾರಕ್ಕೂ ಹಣ ನಷ್ಟ ಯಾವುದೇ ರಸ್ತೆಯಾಗುತ್ತಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಜಿಲ್ಲೆಯಲ್ಲಿ ಯಾವುದೇ ರಸ್ತೆ ಅಭಿವೃದ್ಧಿ ಮಾಡುವುದಾದರೆ ಡಿಸೆಂಬರ್‌ನಿಂದ ಏಪ್ರಿಲ್ ಒಳಗೆ ಮಾಡಬೇಕೆಂಬುದು ನನ್ನ ವಿನಂತಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ಬೋಪಯ್ಯನವರು ಕೊಟ್ಟಿರತಕ್ಕ ಸಲಹೆ ಸೂಕ್ತವಾಗಿದೆ. ಏಕೆಂದರೆ, ಕೊಡಗು ಜಿಲ್ಲೆಯಲ್ಲಿ ಯಾವುದೇ ಕೆಲಸ ಮಾಡಬೇಕಾದರೂ ಡಿಸೆಂಬರ್ ನವೆಂಬರ್ ವರೆಗೆ ಮಳೆಯಾಗುತ್ತದೆ, ಆದಾದಮೇಲೆ ನಾಲ್ಕೈದು ತಿಂಗಳು ಮಾತ್ರ ಮೇಗೆ ಬಿಡುವು ಇರುವುದರಿಂದ ಆ ಸಂದರ್ಭದಲ್ಲಿ ಕೆಲಸವಾಗಬೇಕು ಎಂಬುದನ್ನು ನಾನೂ ಒಪ್ಪುತ್ತೇನೆ. ನಾನು ಲೋಕೋಪಯೋಗಿ ಕಾರ್ಯದರ್ಶಿಯವರಿಗೆ ಸೂಚನೆ ಕೊಟ್ಟು ಎಲ್ಲಾ ಕೆಲಸಗಳೂ ಈ ಅವಧಿಯೊಳಗೆ ಮುಗಿಸಲು, ಮೇನ್‌ಟೆನೆನ್ಸ್ ಕೆಲಸವಾಗಬೇಕೆಂದು ಸೂಚನೆಯನ್ನು ಕೊಡುತ್ತೇನೆ. ಇದರ ಜೊತೆಗೆ ಕಳೆದ ವರ್ಷ ಅಂದರೆ 2004–05ನೇ ಸಾಲಿನ ಸುಮಾರು 7 ಕೋಟಿ 3 ಲಕ್ಷ ರೂಪಾಯಿಗಳನ್ನು ಮೇನ್‌ಟೆನೆನ್ಸ್ ಎಂದು ಖರ್ಚು ಮಾಡಿದ್ದಾರೆ, ಅದನ್ನು ಪರಿಶೀಲನೆ ಮಾಡಿ ಏಕೆ ಕ್ವಾಲಿಟಿ ವರ್ಕ್ ಮಾಡಿಲ್ಲ ಎನ್ನುವುದರ ಬಗ್ಗೆ ವಿಚಾರಿಸಲು ಲೋಕೋಪಯೋಗಿ ಕಾರ್ಯದರ್ಶಿಯವರಿಗೆ ಸೂಚನೆಯನ್ನು ಕೊಡುತ್ತೇನೆ. ಮತ್ತು ತಾವೇನು ಹೇಳಿದ್ದೀರಿ ಮೈಸೂರಿನಿಂದ ಹಿಡಿದು ಮಡಿಕೇರಿಯ ಮೂಲಕವಾಗಿ ಮಂಗಳೂರಿಗೆ ಹೋಗತಕ್ಕ ರಸ್ತೆ ಬಹಳ ಮಹತ್ವದ್ದು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೋಸ್ಕರವೆ ನಮ್ಮ ಸರ್ಕಾರ ಹೋಗತಕ್ಕ ರಸ್ತೆ ಬಹಳ ಮಹತ್ವವನ್ನು ಕೊಡಬೇಕು. ನಿಮ್ಮಲ್ಲಿರತಕ್ಕ ರಸ್ತೆಗಳ ಕೆಲಸವಾಗಬೇಕು ಎಂಬ ದೃಷ್ಟಿಯಿಂದ ಮೈಸೂರು–ಬಂಟ್ವಾಳ, ಕಣ್ಣಾನೂರು–ಮಾಕುಟ್ಟಾ, ಮಡಕೇರಿ–ಕುಟ್ಟಾ ಹಿರಿಸಾವೆ–ಬೆಟ್ಟಳ್ಳಿ, ಹುಣಸೂರು–ತಲಕಾವೇರಿ, ವಿರಾಜಪೇಟೆ–ಬೈಂದೂರ್ ರಸ್ತೆ ಇಷ್ಟೂ ರಸ್ತೆಗಳು ಸಹಿತ ಸುಮಾರು ಒಟ್ಟು 513 ಕಿ.ಮೀ. ಉದ್ದದ ರಸ್ತೆಗಳಲ್ಲಿ ಇದನ್ನು ಗುತ್ತಿಗೆ ಆಧಾರದ ಮೇಲೆ ಇದನ್ನು ಮಾಡಲು ನಾವು ಕೆಲಸಗಳನ್ನು ತೆಗೆದುಕೊಂಡಿರತಕ್ಕ

ವಿವರಗಳನ್ನು ಕೊಟ್ಟಿದ್ದೇವೆ. ಬೆಂಗಳೂರು ಎನ್ನತಕ್ಕ ರಸ್ತೆಯೇನಿದೆ ಇದು ಬಹುಶಃ ಕೊಡಗು ಜಿಲ್ಲೆಯ ಮೂಲಕ ಪಾಸ್ ಆಗುತ್ತದೆಂದು ಕಾಣುತ್ತದೆ. ಅದನ್ನು ನಾನು ವೆರಿಫೈ ಮಾಡಿ ಈ ಸದನದಲ್ಲೆ ಉತ್ತರವನ್ನು ಕೊಡುತ್ತೇನೆ. ಏಕೆಂದರೆ, ನಾನು ಲೋಕೋಪಯೋಗಿ ಸಚಿವರ ಪರವಾಗಿ ಉತ್ತರ ಕೊಡುತ್ತಿದ್ದೇನೆ. ಇದು ಏಕೆ ಆ ರೀತಿ ಬಂತು ಎಂಬ ವಿವರಣೆಯನ್ನು ನಿಮಗೆ ಒದಗಿಸಿಕೊಡುತ್ತೇನೆ.